ಶ್ರೀ ಜೆ.ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಪ್ರಮಾಣದ ಉದ್ಯಮಗಳ ಮತ್ತು ವಿದ್ಯುತ್ ಮಂತ್ರಿಗಳು). —

ಅ) ಕರ್ನಾಟಕ ರಾಜ್ಯ ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಸಸ್ ಜಂಟಿ ನಿರ್ದೇಶಕರು (ಅಂಕಿಅಂಶ) ಇವರಿಗೆ ನೀಡಲಾಗಿರುವ ಕೆಲಸ ಕಾರ್ಯಗಳು ಈ ಕೆಳಕಂಡಂತೆ ಇವೆ.

ಅ) ಮಹೋದ್ಯಮದ ಸಾರ್ವಜನಿಕ ಉದ್ದಿಮೆಗಳಿಗೆ ಸಂಬಂಧಪಟ್ಟ ವಾರ್ಷಿಕ ವರದಿಯನ್ನು ತಯಾರು ಮಾಡಲು ಸಹಕರಿಸುವುದು ಮತ್ತು ಅದನ್ನು ವಿಧಾನ ಮಂಡಲಕ್ಕೆ ಒಪ್ಪಿಸುವಿಕೆ.

ಆ) ಮಹೋದ್ಯಮದ ವಿವಿಧ ಪ್ರಕಟಣೆಗಳನ್ನು ತಯಾರಿಸಿ ಮುದ್ರಣಗೊಳಿಸುವಲ್ಲಿ ಸಹಕರಿಸುವಿಕೆ

ಇ) ಸಾರ್ವಜನಿಕ ಉದ್ದಿಮೆಗಳ ಬಗ್ಗೆ ವಿಶೇಷ ವರದಿಗಳನ್ನು ತಯಾರಿಸುವಿಕೆ.

ಈ) ಮಾಸಿಕ ಹಾಗೂ ತ್ರೈಮಾಸಿಕ ಸಭೆಗಳಿಗೆ ಬೇಕಾದ ಮಾಹಿತಿಯನ್ನು ಸಾರ್ವಜನಿಕ ಉದ್ದಿಮೆಗಳಿಂದ ಸಂಗ್ರಹಿಸಿ ಸಕಾಲದಲ್ಲಿ ಸಭೆಗಳನ್ನು ನಡೆಸುವುದಂ ಮತ್ತು ಸಭೆಗಳಲ್ಲಿ ಭಾಗವಹಿಸುವುದು

ಉ) ಗಣಕೀಕೃತ ಅಧಿಕಾರಿಗಳ ಸೇವೆಯ (ಕಂಪ್ಯೂಟರೈಸ್ಡ್ ಎಕ್ಸಿಕ್ಯೂಟೀವ್ ಪ್ಲೇಸ್‌ಮೆಂಟ್ ಸರ್ವೀಸಸ್) ಮಾಹಿತಿಯ ಸಂಗ್ರಹಣೆ ಹಾಗೂ ನಿರ್ವಹಣೆ

ಆ) ಜಂಟಿ ನಿರ್ದೇಶಕರು (ಅಂಕಿಅಂಶ) ಇವರಿಗೆ ನಿರ್ಧಿಷ್ಟವಾದ ಹಾಗೂ ಸಾಕಷ್ಟು ಕೆಲಸಗಳಿರುವುದರಿಂದ ಹುದ್ದೆಯನ್ನು ಕೆಳದರ್ಜೆಗೆ ಇಳಿಸಲು ಅಥವಾ ರದ್ದು ಪಡಿಸಲು ಸರ್ಕಾರ ಯೋಜಿಸಿರುವುದಿಲ್ಲ.

ಇ) ಜಂಟಿ ನಿರ್ದೇಶಕರ ನಿಯೋಜನೆ ಅವಧಿ ಮುಗಿದಿರುವುದಿಲ್ಲ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಲ್ಲಿನ ಕೆಲಸವನ್ನು ಅಸಿಸ್ಟೆಂಟ್ ಡೈರೆಕ್ಟರ್ ಮಾಡಂತ್ತಿದ್ದರು. ವಿನಾ ಕಾರಣ ಅಲ್ಲಿಗೆ ಒಬ್ಬ ಜಂಟಿ ನಿರ್ದೇಶಕರನ್ನು ಪೋಸ್ಟ್ ಮಾಡಿದ್ದೀರಿ ಅಲ್ಲಿ ಕೆಲಸ ಕಾರ್ಯ ಇಲ್ಲ. ಅವನನ್ನು ಕೆಳಕ್ಕಿಳಿಸುವುದಿಲ್ಲ ಮೇಲಕ್ಕೆ ಕಳಿಸುವುದಿಲ್ಲವೆಂದು ಹೇಳುತ್ತಿದ್ದೀರಿ. ತಮ್ಮ ವಿವೇಚನೆಯನ್ನು ಉಪಯೋಗಿಸಿ ಕೆಲಸ ಮಾಡಿ. ವಿನಾಕಾರಣವಾಗಿ ಒಬ್ಬ ಮನುಷ್ಯನನ್ನು ಅಲ್ಲಿ ಇಟ್ಟುಕೊಂಡಿರುವುದಕ್ಕೆ ಬದಲು ಬೇರೆ ಇಲಾಖೆಗೆ ಕಳಿಸಿಕೊಡಿ.

SRI J. H. PATEL.—I will consider.

ಶ್ರೀ ವೇದಾಂತ ಹೆಬ್ಬಿಗೆ.—ನಾನು ಕೇಳಿದ ಪ್ರಶ್ನೆಗೆ ಸಮರ್ಪಕವಾದ ಉತ್ತರ ಬರಲಿಲ್ಲ. ಆದ್ದರಿಂದ ನಾನು ವಾಕ್ ಔಟ್ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭೆಯಿಂದ ನಿರ್ಗಮಿಸಿದರು)

ಎನ್‌ಜಿಇಎಫ್‌ನ ಪೂರಕ ಘಟಕಗಳು

ಶ್ರೀ. ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಎನ್‌ಜಿಇಎಫ್‌ನ ಒಟ್ಟು ಪೂರಕ ಘಟಕಗಳ ಸಂಖ್ಯೆ ಅವುಗಳ ಹೆಸರು ಮತ್ತು ವಿಳಾಸ ಮತ್ತು ಅವುಗಳ ಮಾಲಿಕರು, ವ್ಯವಸ್ಥಾಪಕ ನಿರ್ದೇಶಕರು ಪಾಲುದಾರರ ಹೆಸರುಗಳು ?

ಆ) ಕಳೆದ ಮೂರು ವರ್ಷದ ಅವಧಿಯಲ್ಲಿ ಪ್ರತಿಯೊಂದು ಪೂರಕ ಘಟಕದಿಂದ ಎನ್‌ಜಿಇಎಫ್‌ಗೆ ಸರಬರಾಜಾದ ಉತ್ಪನ್ನಗಳ ಒಟ್ಟು ಮೌಲ್ಯ (ಯಾವ ವಿಧದ ಉತ್ಪನ್ನ ಎಂಬ ಮಾಹಿತಿಯನ್ನು ಒದಗಿಸುವುದು)?

ಶ್ರೀ ಜೆ. ಹೆಚ್. ಪಟೀಲ್ (ಭಾರಿ ಮತ್ತು ಮಧ್ಯಮ ಕೈಗಾರಿಕೆ ಹಾಗೂ ವಿದ್ಯುತ್ ಸಚಿವರು). —

ಅ) ಅನುಬಂಧ–೧ರಲ್ಲಿ ತೋರಿಸಿದ ಹಾಗೆ

ಆ) ಅನುಬಂಧ–೨ರಲ್ಲಿ ತೋರಿಸಿದ ಹಾಗೆ

ಅನುಬಂಧ-೧

ಎನ್‌ಜಿಇಎಫ್ ಪೂರಕಗಳ ಪಟ್ಟಿ

ಕ್ರಮ ಸಂಖ್ಯೆ	ಪೂರಕ ಕೈಗಾರಿಕೆಯ ಹೆಸರು	ವಿಳಾಸ	ಮಾಲೀಕರ ಹೆಸರು
೧	ಶ್ಯಾಂಸುಂದರ್ ಇಂಡಸ್ಟ್ರೀಸ್	ಎ೧, ಕೈಗಾರಿಕಾ ವಸಾಹತು, ಮಹದೇವಪುರ ಬೆಂಗಳೂರು-೪೮	ಎಂ. ಶಾಮಣ್ಣ
೨	ಅಸೋಸಿಯೇಟೆಡ್ ಮೆಟಲ್ಸ್	ಎ೨, -,,-	ಕೆ. ಎಸ್. ಕುಮಾರ್
೩	ಭರತ್ ಡೈಕ್ಯಾಸ್ಟ್	ಎ೪, -,,-	ಆರ್. ಎನ್. ಸತೀಶ್
೪	ಬಿಸ್‌ಲಾಲ್ ಸ್ಟ್ಯಾಂಪಿಂಗ್ಸ್	ಎ೫, -,,-	ಅಮೃತ್‌ಲಾಲ್
೫	ಯಾಂನೈಟೆಡ್ ಇಂಜಿನಿಯರ್ಸ್	ಎ೫, -,,-	ಉಬೀದುಲ್ಲಾಖಾನ್ ಮತ್ತು ಧನಂಜಯ
೬	ಶ್ರೀ ವಿನಾಯಕ ವಿದ್ಯುತ್ ಮೋಟಾರ್ಸ್	ಎ೬ -,,-	ಎಲ್. ನಂಜಯ್ಯ
೭	ಪ್ರಸಿಮ್ಯಾಕ್ಸ್ ಇಂಜಿನಿಯರಿಂಗ್	ಬಿ೧೨ -,,-	ಎಂ. ಮಂಜುನಾಥಶೆಟ್ಟಿ
೮	ಸ್ಟ್ಯಾಂಡರ್ಡ್ ಅಲ್ಲಾಯ್ಸ್	ಬಿ೧೧ -,,-	ಎಸ್. ಷಣ್ಮುಗಂ
೯	ಶೇಬಾ ವುಡ್ ಕ್ರಾಫ್ಟ್ಸ್	ಬಿ೧೦ -,,-	ಕೆವಿ ಬಾಲಾಜಿ ಮತ್ತು ಎನ್‌ಸಿ ಶಂಕರ
೧೦	ಸೌರಭ ಇಂಡಸ್ಟ್ರೀಸ್	ಬಿ೭ಮತ್ತುಬಿ೮ -,,-	ಸುನೀತ ರೆಡ್ಡಿ
೧೧	ಕರ್ನಾಟಕ ಮೈಕಾ ಅಂಡ್ ಮೈಕಾ ನೈಟ್ ಇಂಡಸ್ಟ್ರೀಸ್	ಸಿ೨೧ ಮತ್ತು ಸಿ೨೨ -,,-	ಹೆಚ್. ಹನುಮಂತಯ್ಯ
೧೨	ರೋಟೊಮ್ಯಾಕ್ (ಇಂಡಿಯಾ)	ಸಿ೨೦ -,,-	ಶಿವಶಂಕರ್
೧೩	ಎಂವಿ ಇಂಡಸ್ಟ್ರೀಸ್	ಸಿ೧೯ -,,-	ಐ.ಎಸ್.ಮೃತ್ಯುಂಜಯ
೧೪	ಮೈಕ್ರೋಸ್	ಸಿ೧೮ -,,-	ಎಂ. ಆರ್. ನಾಯಕ್
೧೫	ಸುಧಾ ಟೇಕ್‌ಲೈಟ್ಸ್	ಸಿ೧೭ -,,-	ಆರ್. ಸತ್ಯಮೂರ್ತಿ
೧೬	ಟೋನಿವಿನ್ ಡೈನಮಿಕ್ಸ್	ಸಿ೨೩ -,,-	ಇ. ಎಂ. ನೋಯಲ್
೧೭	ರೋಹಿಣಿ ಫಿಸಿಕಲ್ ಹ್ಯಾಂಡಿಕ್ಯಾಪ್ಡ್ ಸೊಸೈಟಿ	ಡಿ೨೭ ಕೈಗಾರಿಕಾ ವಸಾಹತು ಮಹದೇವಪುರ ಬೆಂಗಳೂರು-೪೮	ಪ್ರಸಾದ್
೧೮	ಚೇತನ	೧೧೪, ರತ್ನವಿಲಾಸ ರಸ್ತೆ, ಬೆಂಗಳೂರು-೪	ಕರ್ನಾಟಕ ರಾಜ್ಯ ಸಮಾಜ ಕಲ್ಯಾಣ ಮಂಡಳಿ
೧೯	ಪೈನ್ ಡಿಸೇಬ್ಲ್ಡ್ ಇಂಡಸ್ಟ್ರೀಸ್	ಎಂ ೧೨೦, ಕೈಗಾರಿಕಾ ವಸಾಹತು, ರಾಜಾಜಿನಗರ ಬೆಂಗಳೂರು-೧೦	ಕೆ. ಎಸ್. ರಾಜು

ಅನುಬಂಧ-೨

ಪೂರಕಗಳಿಂದ ಸರಬರಾಜಿಸಿದ ಮೌಲ್ಯಗಳ ಅಂಕಿಅಂಶಗಳು (ಮೌಲ್ಯ ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಘಟಕದ ಹೆಸರು	೧೯೮೫-೮೬	೧೯೮೬-೮೭	೧೯೮೭-೮೮	ಉಪಾಂಗಗಳು
೧	೨	೩	೪	೫	೬
೧	ಶಾಂಸಂಂದರ್ ಇಂಡಸ್ಟ್ರೀಸ್	೩.೩೫	೩.೯೦	೪.೭೦	ಸ್ಟೀಲ್ ಫ್ಯಾಬ್ರಿಕೇಷನ್ ಐಟಂಸ್
೨	ಆಸೋಸಿಯೇಟೆಡ್ ಮೆಟಲ್ಸ್	೨೩.೪೯	೨೪.೦೩	೩೨.೫೨	ಕಾಪರ್ ಬಸ್‌ಬಾರ್ಸ್ ಅನ್ಡ್ ಪ್ರೊಪೈಲ್ ಬಾರ್ಸ್
೩	ಸೌರಭ ಇಂಡಸ್ಟ್ರೀಸ್	೮.೦೩	೧೬.೨೦	೧೮.೪೯	ಕಪ್ಲ್ಡ್ ಅನ್ಡ್ ಮೋನೋಬ್ಲಾಕ್ ಪಂಪ್ಸ್ ಅಪ್‌ಟು ೧೦ ಹೆಚ್‌ಪಿ
೪	ಶೇಬಾ ಫುಡ್ ಕ್ರಾಫ್ಟ್ಸ್	೧೦.೨೫	೧೬.೮೩	೧೬.೬೦	ಪ್ಯಾಕಿಂಗ್ ಬಾಕ್ಸ್‌ಸ್ ಅನ್ಡ್ ಪ್ಯಾಕಿಂಗ್ ವೆಂಟೀರಿಯಲ್ಸ್
೫	ಸ್ಟ್ಯಾಂಡರ್ಡ್ ಅಲ್ಲಾಯ್ಸ್	೧೦.೭೫	೧೯.೮೭	೧೩.೦೦	ನಾನ್ ಫೆರಸ್ ಕ್ಯಾಸ್ಟಿಂಗ್ ಐಟಂಸ್
೬	ಸುಧಾ ಬೇಕ್‌ಲೈಟ್ಸ್	೧.೩೮	೩.೨೧	೨.೭೨	ಬೇಕ್‌ಲೈಟ್ ಮೆಲಾಮಿನ್ ಮೌಲ್ಡೆಡ್ ಕಾಂಪೊನೆಂಟ್ಸ್
೭	ಪ್ರಸಿಮ್ಮಾಕ್ಸ್ ಎಂಜಿನಿಯರಿಂಗ್	೬.೧೭	೧೬.೭೮	೧೭.೦೭	ಎಂಡಿಯಂ ಸೈಸ್ಡ್ ಮೆಷಿನ್ಡ್ ಕಾಂಪೊನೆಂಟ್ಸ್
೮	ಮೈಕ್ರೋಸ್	೫.೭೦	೧೦.೧೯	೧೦.೭೩	ಲೈಟ್‌ಸೈಸ್ಡ್ ಕಾಂಪೊನೆಂಟ್ಸ್
೯	ಎಂ. ವಿ. ಇಂಡಸ್ಟ್ರೀಸ್	೪.೪೦	೯.೯೭	೮.೨೭	ಪಾಸ್ಟರ್ಸ್ ಅಪ್‌ಟು ಎಂ೧೨
೧೦	ರೋಟಾಮ್ಯಾಕ್ (ಇಂಡಿಯಾ)	೧.೭೦	೨.೪೮	೫.೨೩	ಸ್ಪ್ರಿವರಿಂಗ್ ಅನ್ಡ್ ಬ್ರಷ್ ಹೋಲ್ಡರ್ಸ್
೧೧	ಕರ್ನಾಟಕ ಮೈಕಾ ಅನ್ಡ್ ಮೈಕಾನೈಟ್ ಇಂಡಸ್ಟ್ರೀಸ್	೫.೪೨	೮.೩೫	೮.೨೨	ಮೈಕಾ ಪ್ಲಾಡಕ್ಟ್ಸ್
೧೨	ಟೋನಿರಿನ್ ಡೈನಮಿಕ್ಸ್	೮.೦೦	೫.೩೮	೭.೪೭	ಸ್ಪೆಷಲ್ ಮೋಟಾರ್ಸ್ ಪಾರ್ ಸ್ವಿಚ್‌ಗೇರ್

೧	೨	೩	೪	೫	೬
೧೩	ರೋಹಿಣಿ ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಸೊಸೈಟಿ	೦.೨೧	೦.೪೮	೧.೭೧	ಪ್ರೆಸ್ಡ್ ಕಾಂಪೊನೆಂಟ್ಸ್ ಆನ್ಡ್ ಸ್ಟ್ಯಾಂಪಿಂಗ್ಸ್
೧೪	ಚೇತನ	೨.೦೦	೨.೧೦	೨.೨೮	ಅಸ್‌ಬೆಸ್ಟಾಸ್ ಆನ್ಡ್ ಲೆದರ್ ಕ್ಯಾಂಡ್ ಗ್ಲೋವ್ಸ್
೧೫	ಪೈನ್ ಡಿಸೇಲ್ಡ್ ಇಂಡಸ್ಟ್ರೀಸ್	೦.೧೦	೦.೪೫	೦.೨೦	ಲೈಟ್‌ಸೈಸ್ಡ್ ಮೆಷಿನ್ಡ್ ಕಾಂಪೊನೆಂಟ್ಸ್
೧೬	ಯುನೈಟೆಡ್ ಎಂಜಿನಿಯರ್ಸ್	೨೫.೦೪	೫೮.೬೬	೫೮.೭೨	ಕಾಂಪೂನೆಂಟ್ಸ್ ಫಾರ್ ಮೋಟಾರ್ಸ್
೧೭	ಶ್ರೀ ವಿನಾಯಕ ವಿದ್ಯುತ್ ಇಂಡಸ್ಟ್ರೀಸ್	೮.೨೯	೧೭.೦೦	೨೦.೨೮	ಮೋಟಾರ್ ವೈನ್‌ಡಿಂಗ್
೧೮	ಭರತ್ ಡೈ ಕ್ಯಾಸ್ಟ್	೦.೯೩	೧೦.೬೨	೧೮.೫೪	ನಾನ್‌ಫೆರಸ್ ಡೈ ಕಾಸ್ಟ್ ಕಾಂಪೂನೆಂಟ್ಸ್
೧೯	ಜಿನ್‌ಲಾಲ್ ಸ್ಟ್ಯಾಂಪಿಂಗ್ಸ್	೦.೨೫	೫.೦೩	೫.೧೯	ಮೋಟಾರ್ ಸ್ಟ್ಯಾಂಪಿಂಗ್ಸ್
	ಮೊತ್ತ	೧೨೫.೪೬	೨೩೦.೬೩	೨೫೨.೯೪	

ಶ್ರೀ ವೀರಯ್ಯ ಸ್ವಾಮಿ.— ೧೯ ಪೂರಕ ಘಟಕಗಳು ಇವೆ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ ಇನ್ನು ಮುಂದೆ ಹೊಸ ಘಟಕಗಳಿಗೆ ಲೈಸನ್ಸ್ ಅಥವಾ ಹೊಸ ಘಟಕಗಳಲ್ಲಿ ಸ್ಥಾಪಿಸಲಿಕ್ಕೆ ಸರಕಾರದಿಂದ ಪರ್ಮಿಷನ್ ಏನಾದರೂ ಕೊಡುತ್ತೀರಾ ? ಈಗಿರುವ ಪೂರಕ ಘಟಕಗಳಲ್ಲಿ ಇಲ್ಲವೇ ಮುಂಬರುವ ಅಂದರೆ ಹೊಸದಾಗಿ ಸ್ಥಾಪಿಸಲ್ಪಡುವ ಘಟಕಗಳಲ್ಲಿ ಈಗಿನ ಅಥವಾ ಹಿಂದಿನ ಜನತಾ ಪಕ್ಷದ ಮಂತ್ರಿಗಳ ಸಂಬಂಧಿಕರು ಯಾರಾದರು ಇದ್ದಾರೆಯೇ ? ಇದ್ದರೆ ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ನನ್ನ ಗಮನಕ್ಕೆ ಬಂದ ಹಾಗೆ ಮಂತ್ರಿಗಳ ಸಂಬಂಧಿಕರು ಇಲ್ಲ. ಅದು ನನಗೆ ಗೊತ್ತಿಲ್ಲ. ತಮಗೇನಾದರೂ ಗೊತ್ತಿದ್ದರೆ ತಿಳಿಸಿ. ಆಕ್ಸಿಲರೀ ಘಟಕಗಳನ್ನು ಯಾರು ಬೇಕಾದರೂ ಸ್ಥಾಪನೆ ಮಾಡಬಹುದು. ಅವರು ಸಪ್ಲೈ ಮಾಡುವ ಸರಕುಗಳ ಗುಣಮಟ್ಟ ಒಳ್ಳೆಯದಾಗಿರಬೇಕು, ಹೆಚ್ಚಿನ ಆಕ್ಸಿಲರೀ ಘಟಕಗಳನ್ನು ಸ್ಥಾಪನೆ ಮಾಡುವ ಯೋಚನೆ ಇಲ್ಲ.

ವಿ. ಐ. ಎಸ್. ಎಲ್. ಕಾರ್ಖಾನೆ ಬಗ್ಗೆ.

೪೦೫೨ ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಶ್ವೇಶ್ವರಯ್ಯ ಉಕ್ಕಿನ ವಿ. ಐ. ಎಸ್. ಎಲ್, ಕಾರ್ಖಾನೆ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳ ವಿದ್ಯುಚ್ಛಕ್ತಿ ಬಾಕಿ ಉಳಿಸಿಕೊಂಡಿರುವುದು ನಿಜವೇ ?

ಆ) ವಿ. ಐ. ಎಸ್. ಎಲ್. ಯನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿರುವುದು ನಿಜವೇ?

ಇ) ವಿ. ಐ. ಎಸ್. ಎಲ್. ನ ಕಳೆದ ಮೂರು ವರ್ಷಗಳಲ್ಲಿನ ನಷ್ಟವೆಷ್ಟು ?

ಶ್ರೀ ಜೆ. ಹೆಚ್. ಪಟೇಲ್, (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಮತ್ತು ವಿದ್ಯುತ್ ಇಲಾಖೆ ಸಚಿವರು).—

ಅ) ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆ ವಿದ್ಯುಚ್ಛಕ್ತಿ ಮಂಡಳಿಗೆ ೭೧.೨೧ ಕೋಟಿ. ರೂ. ಗಳನ್ನು ವಿದ್ಯುಚ್ಛಕ್ತಿ ಬಾಕಿ ಕೊಡಬೇಕಾಗಿದೆ.

ಆ) ನಿಜವಲ್ಲ.

ಇ) ಮೂರು ವರ್ಷಗಳಲ್ಲಿ ಕೆಳಗೆ ಕಾಣಿಸಿದಂತೆ ನಷ್ಟ ಉಂಟಾಗಿದೆ.

	೧೯೮೫-೮೬	೧೯೮೬-೮೭	೧೯೮೭-೮೮
ಆಪಮೌತಾಲ್ಯಪನ ಮತ್ತು ಬಡ್ಡಿಗೆ ಮೊದಲು	೧೫೦೪.೨೦	೮೦೩.೯೫	೫೧೮.೩೦(ಲಕ್ಷ ರೂ. ಗಳಲ್ಲಿ)
ಆಪಮೌತಾಲ್ಯನ ಮತ್ತು ಬಡ್ಡಿ ಮೊತ್ತದ ನಂತರ ಒಟ್ಟು	೩೨೪೦.೭೯	೨೬೧೯.೬೫	೨೪೪೦.೪೮ (ಲಕ್ಷ ರೂ ಗಳಲ್ಲಿ)

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಸುಮಾರು ೭೧ ಕೋಟಿ ರೂಪಾಯಿ ವಿದ್ಯುತ್ ಬಿಲ್ ಬಾಕಿ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ತಾವು ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಈಗಾಗಲೇ ರಾಜ್ಯದಲ್ಲಿ ಬಡವರಿಗೆ ಕೊಟ್ಟಿರತಕ್ಕಂಥ ಜನತಾ ಮನೆಯವರ ವಿದ್ಯುತ್ ಬಿಲ್ ಬಾಕಿ ಇದೆ ಎಂದು ಸುಮಾರು ೫೦-೬೦ ರೂಪಾಯಿ ಬಿಲ್ ಬಾಕಿ ಇದ್ದರೆ ಅಂಥ ಮನೆ ವಿದ್ಯುಚ್ಛಕ್ತಿಯನ್ನು ಡಿಸ್-ಕನೆಕ್ಟ್ ಮಾಡಿದ್ದೀರಿ. ಈ ರೀತಿ ೭೧ ಕೋಟಿ ರೂಪಾಯಿ ಬಾಕಿ ಇದ್ದರೂ ಸಹಾ ಇದನ್ನು ಏತಕ್ಕೆ ಡಿಸ್-ಕನೆಕ್ಟ್ ಮಾಡಿಲ್ಲ ? ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ ಮತ್ತೆ ಇದನ್ನು ಖಾಸಗಿಯವರಿಗೆ ಮಾರಾಟ ಮಾಡುವುದಕ್ಕೆ ನಾವು ಒಪ್ಪಿಲ್ಲ, ಅದು ನಿಜವಲ್ಲ ಎಂದು ಹೇಳಿದ್ದೀರಿ. ಇದರ ಬಗ್ಗೆ ಕೇಂದ್ರ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರಕ್ಕೆ ಕೊಡುವುದರ ಬಗ್ಗೆ ಏನಾದರೂ ಯೋಚನೆಯನ್ನು ಮಾಡಿದ್ದೀರಾ ಎಂದು ಕೇಳುತ್ತೇನೆ ?